# ಕನ್ನಡದಲ್ಲಿ ಅನುವಾದ

ಕೆಆರ್‌ಸಿ ಆರ್‌ಎಸ್‌ಎಸ್‌ಜಿ/ರಜೆ/2019 ದಿನಾಂಕ: 06.02.2019

ಆತ್ಮೀಯ ಪಾಲಕರೇ/ ಪೋಷಕರೇ,

1. ವಿದ್ಯಾರ್ಥಿಗಳು ಮಾರ್ಚ್31 ರಿಂದ ಬೇಸಿಗೆ ರಜೆ ಹೊಂದುವರು. ಚಲನವಲನದ ವೇಳಾಪಟ್ಟಿಯು ಈ ಕೆಳಗಿನಂತಿರುತ್ತದೆ.

| ಕ್ರ ಸಂ | ತರಗತಿಗಳು (ಶೈಕ್ಷಣಿಕ ವರ್ಷ 2018–19) | ಶಾಲೆಯಿಂದ ಬಿಡುವ ದಿನಾಂಕ & ವೇಳೆ |
|---|---|---|
| 1 | VI, VII, VIII ಮತ್ತು X | 31/03/19 (ಭಾನುವಾರ) ಮುಂಜಾನೆ 09.00 ಗಂಟೆ ನಂತರ |
| 2 | IX ಮತ್ತು XI | 18/05/19 ( ಶನಿವಾರ) ಮಧ್ಯಾಹ್ನ 03.00 ಗಂಟೆ ನಂತರ |
| 3 | XII | 19/03/19 (ಮಂಗಳವಾರ) ಮುಂಜಾನೆ 09.00 ಗಂಟೆ ನಂತರ |

| ಕ್ರ ಸಂ | ತರಗತಿಗಳು (ಶೈಕ್ಷಣಿಕ ವರ್ಷ 2019-20) | ಶಾಲೆಗೆ ಮರಳಿ ಬರುವ ದಿನಾಂಕ ಮತ್ತು ವೇಳೆ |
|---|---|---|
| 1 | VII ಮತ್ತು VIII | 29/05/19 (ಬುಧವಾರ) ಮುಂಜಾನೆ 09.00 ರಿಂದ ಸಂಜೆ 04.00 ರವರೆಗೆ |
| 2 | IX ಮತ್ತು XI | 30/05/19 (ಗುರುವಾರ) ಮುಂಜಾನೆ 09.00 ರಿಂದ ಸಂಜೆ 04.00 ರವರೆಗೆ |
| 3 | X ಮತ್ತು XII | 31/05/19 (ಶುಕ್ರವಾರ) ಮುಂಜಾನೆ 09.00 ರಿಂದ ಸಂಜೆ 04.00 ರವರೆಗೆ |
| ಸೂಚನೆ: ಸಂಜೆ 04.30 ರ ನಂತರ ಶಾಲೆಯ ಒಳಗೆ ಬರಲು ಅನುಮತಿ ಇರುವುದಿಲ್ಲ. | | |

2. ಮಕ್ಕಳನ್ನು ಪಾಲಕರಿಗೆ / ಅಧಿಕೃತ ಪೋಷಕರಿಗೆ ಮಾತ್ರ ಹಸ್ತಾಂತರಿಸಲಾಗುವುದು – ದಯವಿಟ್ಟು ಶಾಲೆಯು ನೀಡಿರುವ ಗುರುತಿನ ಚೀಟಿಯನ್ನು ಹೊಂದಿರುವಿರಿ ಎಂಬುದನ್ನು ಖಚಿತಪಡಿಸಿಕೊಳ್ಳಿ. ಇದನ್ನು ಹೊಂದಿರದಿದ್ದಲ್ಲಿ ವಿಳಂಬವಾಗಬಹುದು ಕಾಯಲು ಸಿದ್ಧರಿರಬೇಕು ಏಕೆಂದರೆ ಮೊದಲು ಗುರುತಿನ ಚೀಟಿ ಹೊಂದಿರುವವರಿಗೆ ಅವರ ಮಕ್ಕಳನ್ನು ಹಸ್ತಾಂತರಿಸಲಾಗುವದು. ಒಂದು ವೇಳೆ ತಾವು ತಮ್ಮ ಮಗುವನ್ನು ಖುದ್ದಾಗಿ ಬಂದು ಕರೆದುಕೊಂಡು ಹೋಗುವ ಸ್ಥಿತಿಯಲ್ಲಿ ಇಲ್ಲವಾದಲ್ಲಿ, ದಯವಿಟ್ಟು ಅಧಿಕೃತ ವ್ಯಕ್ತಿಯ ಭಾವಚಿತ್ರ ಒಳಗೊಂಡಿರುವ ತಮ್ಮ ಅಧಿಕೃತ ಸಹಿ ಇರುವ ಅಧಿಕಾರ ಪತ್ರ (ಲಗತ್ತಿಸಿರುವ ಅರ್ಜಿ ನಮೂನೆ ಪ್ರಕಾರ) ಕಳುಹಿಸಬೇಕು, ಸಹಿಯನ್ನು ಅರ್ಧ ಭಾಗ ಭಾವಚಿತ್ರದ ಮೇಲೆ ಉಳಿದ ಭಾಗ ಅರ್ಜಿಯ ಮೇಲೆ ಇರುವಂತೆ ಮಾಡಿ ಕಳುಹಿಸಬೇಕು. ಕರೆದುಕೊಂಡು ಹೋಗಲು ಬರುವ ವ್ಯಕ್ತಿಯ ಸಹಿ ಕೂಡ ದೃಢಿಕರಿಸತಕ್ಕದ್ದು. ಅಧಿಕೃತ ವ್ಯಕ್ತಿಯು ಪೋಷಕರಿಗೆ ನೀಡಲಾಗಿರುವ ಗುರುತಿನ ಚೀಟಿ ಹೊಂದಿರಬೇಕು. ಅರ್ಜಿಯ ಮಾದರಿಯನ್ನು ಲಗತ್ತಿಸಲಾಗಿದೆ. ತಮ್ಮ ಸಹಕಾರವನ್ನು ಕೋರಲಾಗಿದೆ. ಹೊಸದಾಗಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಅಧಿಕೃತ ಪೋಷಕರಿಗೆ ತಕ್ಷಣ ಗುರುತಿನ ಚೀಟಿ ನೀಡಲಾಗುವುದು.

3. ದಯವಿಟ್ಟು ತಮ್ಮ ಮಕ್ಕಳು ಕೊಟ್ಟ ಸಮಯದಲ್ಲಿ ಮರಳುವುದನ್ನು ಖಚಿತಪಡಿಸಿಕೊಳ್ಳಿ. ಯಾರಾದರೂ ತಪ್ಪಿದ್ದಲ್ಲಿ ಅಂಥವರಿಗೆ ತಲಾ ಒಂದು ದಿನಕ್ಕೆ ರೂ.1000/- (ಒಂದು ಸಾವಿರ ರೂಪಾಯಿಗಳು ಮಾತ್ರ) ವಿಳಂಬ ದಂಡ ವಿಧಿಸಲಾಗುವುದು ಮತ್ತು ಸದರಿ ದಂಡವನ್ನು ವಿದ್ಯಾರ್ಥಿಗಳ ಪಾಕೆಟ್ ಮನಿ ಖಾತೆಯಿಂದ ಕಡಿತಗೊಳಿಸಲಾಗುವುದು. ಹೀಗೆ ತಡವಾಗಿ ಬಂದ ವಿದ್ಯಾರ್ಥಿಗಳು ಕೆಲಸದ ದಿನಗಳಲ್ಲಿ ಮಾತ್ರ ಮುಂಜಾನೆ 9.00 ರಿಂದ ಮಧ್ಯಾಹ್ನ 1.30 ರೊಳಗಾಗಿ ಪ್ರಾಚಾರ್ಯರಿಗೆ ವರದಿ ಮಾಡಬೇಕು – ಈ ಸಮಯದ ನಂತರ ಬಂದವರಿಗೆ ಶಾಲೆಯನ್ನು ಪ್ರವೇಶಿಸಲು ಅನುಮತಿ ನೀಡುವುದಿಲ್ಲ. ಶಿಕ್ಷಕರು / ನಿಲಯ ಪಾಲಕರು ತಡವಾಗಿ ಬಂದ ವಿದ್ಯಾರ್ಥಿಗಳನ್ನು ನೇರವಾಗಿ ಸ್ವೀಕರಿಸಬಾರದೆಂಬ ಕಟ್ಟುನಿಟ್ಟಿನ ಸೂಚನೆಯಡಿಯಲ್ಲಿ ಇರುತ್ತಾರೆ. ಯಾರೂ ವಿಳಂಬವಾಗಿ ಬರುವುದಿಲ್ಲವೆಂದು ಶಾಲೆಯು ಭರವಸೆ ಹೊಂದಿರುತ್ತದೆ ಮತ್ತು ವಿರಾಮದ ಹಬ್ಬದ ಉತ್ಸಾಹವು ಹಾಳಾಗುವುದಿಲ್ಲ.

4. ಪಾಲಕರು/ ಪೋಷಕರು ವರ್ಗ ಶಿಕ್ಷಕರು ಅಲ್ಲದೇ ವಿಷಯ ಶಿಕ್ಷಕರು ಮತ್ತು ಮೆಂಟರಗಳನ್ನು ಭೇಟಿಯಾಗಿ ತಮ್ಮ ಮಕ್ಕಳ ಪ್ರಗತಿಯ ಕುರಿತು ಚರ್ಚಿಸಬೇಕಾಗಿ ಕೋರಲಾಗಿದೆ. ಅಲ್ಲದೇ ಎಲ್ಲ ಪಾಲಕರು/ ಪೋಷಕರು ನಿರ್ಗಮಿಸುವ ಮುನ್ನ ಶಾಲೆಯ ವೈದ್ಯರನ್ನು ಭೇಟಿಯಾಗಬೇಕಾಗಿ ವಿನಂತಿ. ಏನಾದರೂ ವೈದ್ಯಕೀಯ ತೊಂದರೆಗಳಿದ್ದರೆ ಅವರ ಜೊತೆ ಚರ್ಚಿಸಿ ಮತ್ತು ಅದರಂತೆ ತರಬೇತಿಯ ನಷ್ಟವನ್ನು ತಪ್ಪಿಸಲು ವಿರಾಮದಲ್ಲಿಯೇ ಚಿಕಿತ್ಸೆಯನ್ನು ಕೊಡಿಸತಕ್ಕದ್ದು. ತಾವು ಒಳಗೆ ಬಂದ ತಕ್ಷಣ ಅವಸರದಲ್ಲಿಯೇ ಇರುವಿರೆಂದು ಶಾಲೆಗೆ ತಿಳಿದಿದೆ, ಆದರೆ ತಮ್ಮ ಅಮೂಲ್ಯವಾದ ಸಮಯದ ಕೆಲವು ಕ್ಷಣಗಳು ದೀರ್ಘವಾಗಿ ತಮ್ಮ ಮಗಳನ್ನು ಇನ್ನು ಉತ್ತಮವಾಗಿ ನೋಡಿಕೊಳ್ಳಲು ಸಹಾಯವಾಗುವುದು. ಶಾಲೆಯು ತಮ್ಮ ಸಹಕಾರವನ್ನು ಕೋರುತ್ತದೆ.

5. ಎಲ್ಲಾ ವಿದ್ಯಾಥಿಗಳು ಶಾಲೆಯಿಂದ ರಜೆಯ ಮೇಲೆ ಹೋಗುವಾಗ ಮತ್ತು ರಜೆಯನ್ನು ಮುಗಿಸಿ ಬರುವಾಗ ಶಾಲೆಯ ಸಮವಸ್ತ್ರ (ಟ್ರ್ಯಾಕ್ ಸೂಟ್) ಮತ್ತು ಗುರುತಿನ ಚೀಟಿಯನ್ನು ಹಾಕಿರಬೇಕು. ಇದನ್ನು ಉಲ್ಲಂಘಿಸಿದರೆ ಶಾಲೆಯ ಒಳಗೆ ಬರಲು ಅಥವಾ ಹೊರಗೆ ಹೋಗಲು ಅನುಮತಿ ಇರುವುದಿಲ್ಲ.

"ರಜೆಯ ಶುಭಾಷಯಗಳು"